# ಹೀಗೊಂದು ಸಹಾಯ ಹಸ್ತ!

ಚಿತ್ರದುರ್ಗ ನಗರದ ಬಿ.ಡಿ. ರಸ್ತೆಯ ಆರೋಗ್ಯ ಇಲಾಖೆ ಕಚೇರಿ ಮುಂಭಾಗದಲ್ಲಿರುವ ವಿವೇಕಾನಂದಯ್ಯ ಪೆಟ್ರೋಲ್ ಬಂಕ್‌ನ ಜಾಗದಲ್ಲಿ ವಿಶಿಷ್ಟವಾದ ಸಹಾಯ ಹಸ್ತ ಅಲ್ಮೆರಾ ಇಡಲಾಗಿದೆ. ಇದರಲ್ಲಿ ಯಾರು ಬೇಕಾದರೂ ತಮಗೆ ಅಗತ್ಯವಿಲ್ಲದ ಉಪಯೋಗಿ ವಸ್ತುಗಳನ್ನು ಇಡಬಹುದು. ಅವುಗಳನ್ನು ಅಗತ್ಯವಿರುವವರು ತೆಗೆದುಕೊಳ್ಳಬಹುದು. ಬಟ್ಟೆ, ಪುಸ್ತಕ, ಪೆನ್ನು, ಚಪ್ಪಲಿ, ಬ್ಯಾಗ್, ನಿತ್ಯೋಪಯೋಗಿ ವಸ್ತುಗಳನ್ನು ಈಗಾಗಲೇ ಇಟ್ಟು, ತೆಗೆದುಕೊಳ್ಳುವುದು ನಡೆದಿದೆ. ಬಂಕ್ ಸಿಬ್ಬಂದಿ ಇದನ್ನು ನೋಡಿಕೊಳ್ಳುತ್ತಿದ್ದಾರೆ. ಮುಂದೆ ಇದರ ವಿಸ್ತರಣೆಗೆ ಕೂಡ ಯೋಚಿಸಲಾಗುತ್ತಿದೆ. ಇದನ್ನು ಚಿತ್ರದುರ್ಗ ಫೋರ್ಟ್ ಅಡ್ವೆಂಚರ್ ಕ್ಲಬ್‌ನವರು ಮಾಡಿದ್ದಾರೆ.

**–ಡಾ.ಕೆ.ವಿ. ಸಂತೋಷ್, ಚಿತ್ರದುರ್ಗ**







# ರಾಣಿ ಚೆನ್ನಮ್ಮನ ಸಮಾಧಿ

ಸ್ವಾತಂತ್ರ್ಯ ಹೋರಾಟದಲ್ಲಿ ಬೆಳ್ಳಿ ಚುಕ್ಕಿ ಎಂದೇ ಹೆಸರಾದ ವೀರ ರಾಣಿ ಕಿತ್ತೂರ ಚೆನ್ನಮ್ಮ ಬ್ರಿಟಿಷರ ವಿರುದ್ಧ ಸಿಡಿದೆದ್ದ ಸ್ವಾತಂತ್ರ್ಯ ಹೋರಾಟಗಾರ್ತಿ. 1824 ರಲ್ಲಿ ಬ್ರಿಟಿಷರು ಅವರನ್ನು ಬಂಧಿಸಿ ಬೈಲಹೊಂಗಲದಲ್ಲಿ ಇಟ್ಟಿದ್ದು ಅವರು ತಮ್ಮ ಮರಣದ ಕಾಲದವರೆಗೂ ಅಂದರೆ 2ನೇ ಫೆಬ್ರುವರಿ 1829ರ ವರೆಗೆ ಅಲ್ಲಿಯೇ ತಮ್ಮ ಕೊನೆಯ ದಿನಗಳನ್ನು ಕಳೆದರು. ಅವರನ್ನು ಇದೇ ಊರಲ್ಲಿ ಮಣ್ಣು ಮಾಡಿ ಸಮಾಧಿ ಮಾಡಲಾಯಿತು. ಸ್ವಾತಂತ್ರ್ಯದ ಪ್ರೀತಿಗೆ, ಶೂರತ್ವಕ್ಕೆ ಈಗಲೂ ಪ್ರೇರಣೆಯಾದ ಸಮಾಧಿಯ ಚಿತ್ರವಿದು.

**–ಮೀನಾಕ್ಷಿ ಕೆ.ರಾಮಗುಂಡಿ, ಬೈಲಹೊಂಗಲ**

# ಬೇವಿನ ಕಡ್ಡಿಯ ಬ್ರಶ್!

ನಮ್ಮೂರಿಗೆ ಕಟ್ಟಡ ನಿರ್ಮಾಣಕ್ಕಾಗಿ ಬಂದ ಉತ್ತರ ಪ್ರದೇಶ, ಬಿಹಾರ, ಛತ್ತೀಸ್‌ಗಢ, ಒಡಿಶಾದ ವಲಸೆ ಕಾರ್ಮಿಕರು ಬೆಳಿಗ್ಗೆ ಎದ್ದು ಒಂದು ಮರದ ಕಡ್ಡಿ ಬಾಯಲ್ಲಿಟ್ಟು ಜಗಿದು ಬ್ರಶ್‌ನಂತೆ ಹಲ್ಲುಜ್ಜುತ್ತಾ ಇದ್ದುದನ್ನು ನೋಡಿ ಕುತೂಹಲದಿಂದ ವಿಚಾರಿಸಿದೆ. ಅದು ನಮ್ಮೆಲ್ಲರ ಚಿರಪರಿಚಿತ ಕಹಿಬೇವಿನ ಕಡ್ಡಿಯಾಗಿತ್ತು. ನಿಯಮಿತವಾಗಿ ಬೇವಿನ ಕಡ್ಡಿಯಿಂದಲೇ ಹಲ್ಲುಜ್ಜುವ ಅವರ ಹಲ್ಲುಗಳು ಹುಳುಕಿಲ್ಲದೆ, ಗಟ್ಟಿಮುಟ್ಟಾಗಿದ್ದವು.

ನೀಮ್ ಕಾ ಡಾಲೀ ಕಾ ದಾತೂನ್, ನೀಮ್ ಕಾ ದಂಡೀ ಎಂಬ ಈ ಪರಂಪರಾಗತ ಟೂತ್ ಬ್ರಶ್‌ಗಳನ್ನು ತಮಗೆ ಬೇಕಾದಷ್ಟು ಹುಟ್ಟೂರಿನಿಂದಲೇ ತರುತ್ತಾರೆ. 'ಕಹಿಯಿಂದಾಗಿ ಹುಳುಗಳು ಸೇರಿಕೊಳ್ಳುವುದಿಲ್ಲ' ಎಂಬುದು ಅವರ ಅನುಭವದ ಮಾತು. ಅದಕ್ಕೇ ಇರಬೇಕು ಮಾರುಕಟ್ಟೆಯಲ್ಲಿ ಲಭ್ಯವಿರುವ ಎಲ್ಲ ಹರ್ಬಲ್ ಟೂತ್‌ಪೇಸ್ಟ್‌ಗಳಲ್ಲಿ ಕಹಿಬೇವು ಇದ್ದೇ ಇರುತ್ತದೆ.

**–ಡಾ.ವೇಣುಗೋಪಾಲ ಶರ್ಮಾ,**
**ಗುರುವಾಯನಕೆರೆ**

